

# ಅಪಸ್ಮಾರ ಆತಂಕ ಬೇಡ

ಅಪಸ್ಮಾರ ಅಥವಾ ಮೂರ್ಛೆ ರೋಗಕ್ಕೆ ವಯಸ್ಸಿನ ನಿರ್ಬಂಧವಿಲ್ಲ. ಪುಟ್ಟ ಮಗುವಿನಿಂದ ಹಿಡಿದು ಮುದುಕರವರೆಗೆ ಎಲ್ಲರನ್ನೂ ಬಾಧಿಸುವ ಅಪಸ್ಮಾರ ನರಸಂಬಂಧಿ ಬಾಧೆ. ಮೆದುಳಿನ ಚಟುವಟಿಕೆಯಲ್ಲಿ ಉಂಟಾಗುವ ಏರುಪೇರು, ವೈಪರೀತ್ಯದಿಂದ ತಲೆಸುತ್ತು, ಕಣ್ಣುಮಂಜಾಗುವುದು, ಅನಿಯಮಿತ ಹೃದಯ ಬಡಿತ ಮುಂತಾದ ಲಕ್ಷಣಗಳನ್ನು ಹೊಂದಿದ ಅಪಸ್ಮಾರಕ್ಕೆ ಉತ್ತಮ ಚಿಕಿತ್ಸೆ ಇದೆ.

■ ಉಮಾ ಅನಂತ್

ಮೂರನೇ ತರಗತಿಯ ಪುಟಾಣಿ ಪ್ರದ್ಯುಮ್ನ ಶಾಲೆಯಲ್ಲಿ ಬೆಳಗ್ಗಿನ ಪ್ರಾರ್ಥನೆಯ ಸಮಯದಲ್ಲಿ ಸಹಪಾಠಿಗಳೊಂದಿಗೆ ಸರದಿ ಸಾಲಿನಲ್ಲಿ ನಿಂತಿದ್ದ. ನಿಂತ ಕೆಲ ಹೊತ್ತಿನಲ್ಲೇ ತಲೆಸುತ್ತು ಬಂದು ನೆಲಕ್ಕೆ ಬಿದ್ದ. ಕೂಡಲೇ ಶಿಕ್ಷಕರು ಅವನನ್ನು ಕೂರಿಸಿ, ಮುಖಕ್ಕೆ ನೀರು ಚಿಮುಕಿಸಿ ಉಪಚರಿಸಿ ವೈದ್ಯರ ಬಳಿ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು. ಪುಟ್ಟ ಬಾಲಕನಿಗೆ ಬಂದದ್ದು ಅಪಸ್ಮಾರ.

ಸಾಫ್ಟ್‌ವೇರ್ ಎಂಜಿನಿಯರ್ ವೇದಾಂತ್ ಪ್ರತಿಭಾವಂತ. ಕಂಪನಿಯ ಮಹತ್ವದ ಪ್ರಾಜೆಕ್ಟ್ ಒಂದರ ಸಂಪೂರ್ಣ ಮೇಲ್ವಿಚಾರಕನಾಗಿ ಕರ್ತವ್ಯ ನಿಭಾಯಿಸುತ್ತಿದ್ದ. ಆರೋಗ್ಯವಂತನೂ ಆಗಿದ್ದ ವೇದಾಂತ್ ಒಂದು ದಿನ ಮಧ್ಯಾಹ್ನ ಊಟವಾದ ಬಳಿಕ ಇದ್ದಕ್ಕಿದ್ದ ಹಾಗೆ ತಲೆತಿರುಗಿ ಬಿದ್ದು ಬಾಯಿಯಲ್ಲಿ ನೊರೆಯೂ ಬಂದಾಗ ಸಹೋದ್ಯೋಗಿಗಳೆಲ್ಲರಿಗೂ ವಿಪರೀತ ಆತಂಕ, ಗಾಬರಿ. ಈತನಿಗೂ ಬಂದದ್ದು ಮೂರ್ಛೆರೋಗ ಅಥವಾ ಅಪಸ್ಮಾರ.

ಇನ್ನೊಂದು ನಿದರ್ಶನ ನೋಡಿ. ಎಂಬತ್ತೆರಡರ ಹರೆಯದ ವ್ಯಕ್ತಿಗೆ ಸದಾ ಮೂರ್ಛೆ ರೋಗ ಬಾಧಿಸುತ್ತಿತ್ತು. ಫೋರ್ಟಿಸ್ ಆಸ್ಪತ್ರೆಗೆ ದಾಖಲು ಮಾಡಿದಾಗ ಇವರಿಗೆ ಮೆದುಳಿನ ಭಾಗದಲ್ಲಿ ಸಿಟಿ ಹಾಗೂ ಎಂಆರ್‌ಐ ಸ್ಕ್ಯಾನ್ ಮಾಡಿಸಲಾಯಿತು. ಆಗ ಮೆದುಳಿಗೆ ರಕ್ತಪೂರೈಕೆಯಲ್ಲಿ ವ್ಯತ್ಯಾಸ